ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **633**
ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 04.03.2021
ಉತ್ತರಿಸುವ ಸಚಿವರು ಮುಖ್ಯಮಂತ್ರಿಗಳು

*****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸೌರಶಕ್ತಿಯ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)	ಸರ್ಕಾರವು ಸೌರಶಕ್ತಿಯ ಬಳಕೆಯನ್ನು ಉತ್ತೇಜಿಸಲು ಸೌರ ನೀತಿ 2014-21 ನ್ನು ಜಾರಿಗೊಳಿಸಿದ್ದು, ಸರ್ಕಾರದಿಂದ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1. ಕರ್ನಾಟಕ ಕೈಗಾರಿಕಾ ನೀತಿಯಡಿಯಲ್ಲಿ ಸಿಗುವ ಎಲ್ಲಾ ವಿನಾಯಿತಿಗಳನ್ನು ಸೌರ ಯೋಜನೆ ಅಭಿವೃದ್ಧಿದಾರರು ಪಡೆಯಲು ಅವಕಾಶವಿದೆ. • ಸಾಲದ ಪತ್ರಗಳ ಮತ್ತು ಕೈಗಾರಿಕಾ ನಿವೇಶನ ಮತ್ತು ಮಳಿಗೆ ಖರೀದಿ ಪತ್ರಗಳ ನೊಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕಗಳಿಂದ ವಿನಾಯಿತಿ ನೀಡಲಾಗಿದೆ. • ಸೌರ ಯೋಜನೆಗಳನ್ನು ಸ್ಥಾಪಿಸಲು ಭೂ ಸುಧಾರಣೆ ಕಾಯ್ದೆ 109 ರನ್ವಯ ಅನುಮತಿ ಹೊಂದಿದ ಭೂಮಿಗೆ ಪರಿಭಾವಿತ ಭೂ-ಪರಿವರ್ತನೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. 2. ಸೌರ ವಿದ್ಯುತ್ ಘಟಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಪೇಕ್ಷಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ. ಸದರಿ ನೀತಿಯಲ್ಲಿ ಈ ಕೆಳಗಿನ ವರ್ಗಗಳಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ. 1. ಸ್ಪರ್ಧಾತ್ಮಕ ಬಿಡ್ ಮುಖೇನ (ಸೌರ ನವೀಕರಿಸಬಹುದಾದ ಇಂಧನ ಖರೀದಿ ಬಾಧ್ಯತೆ (ಆರ್.ಪಿ.ಓ)) 2. ಸ್ವತಂತ್ರ ವಿದ್ಯುತ್ ಉತ್ಪಾದಕರ ವರ್ಗ (ಸ್ವಂತ ಬಳಕೆ ಮತ್ತು ಮೂರನೇ ವ್ಯಕ್ತಿ ಮಾರಾಟಕ) 3. ಸೋಲಾರ್ ಪಾರ್ಕ್ ಸೌರ ನೀತಿಯಲ್ಲಿ ನಿಗದಿಪಡಿಸಿದ ಸೌರ ನವೀಕರಿಸಬಹುದಾದ ಇಂಧನ ಖರೀದಿ ಬಾಧ್ಯತೆ (ಆರ್.ಪಿ.ಓ) ಗುರಿಯನ್ನು ನಿಗದಿತ ಅವಧಿಯೊಳಗೆ ತಲುಪಲಾಗಿದೆ. ರಾಜ್ಯದಲ್ಲಿ . ಈವರೆಗೆ (ದಿನಾಂಕ: 28.02.2021) 7089.16 ಮೆ.ವ್ಯಾ. ಸಾಮರ್ಥ್ಯದ ಗ್ರಿಡ್ ಆಧಾರಿತ ಸೌರ ಘಟಕಗಳು ಅನುಷ್ಠಾನಗೊಂಡಿರುತ್ತವೆ.

		ಸೌರ ಪಂಪ್‌ಸೆಟ್‌ಗಳ ಅಳವಡಿಕೆ: ಸೌರ ಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್ ಅಳವಡಿಸುವ ಯೋಜನೆಯನ್ನು ಸರ್ಕಾರದಿಂದ 2014-15ನೇ ಸಾಲಿನಿಂದ ಜಾರಿಗೊಳಿಸಿದ್ದು, ಎಂ.ಎನ್.ಆರ್.ಇ. (ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ) ರವರ ಸಹಾಯಧನ, ರಾಜ್ಯ ಸರ್ಕಾರದ ಸಹಾಯಧನದೊಂದಿಗೆ ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಪ್ರತಿ ಪಂಪ್‌ಸೆಟ್‌ಗೆ ರೂ.1 ಲಕ್ಷ ವಂತಿಗೆಯೊಂದಿಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತವಾಗಿ ರಾಜ್ಯದಲ್ಲಿ 3710 ಸಂಖ್ಯೆಯ (ಸಾಮಾನ್ಯ ವರ್ಗ: 3009 ಸಂಖ್ಯೆ, ಪರಿಶಿಷ್ಟ ಜಾತಿ: 487 ಸಂಖ್ಯೆ, ಪರಿಶಿಷ್ಟ ಪಂಗಡ : 214 ಸಂಖ್ಯೆ) ರೈತ ಫಲಾನುಭವಿಗಳ ಜಮೀನಿನ ಕೊಳವೆ ಬಾವಿಗಳಿಗೆ 5 ಹೆಚ್.ಪಿ ಸಾಮರ್ಥ್ಯದ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುತ್ತದೆ. ಸೌರ ಮೇಲ್ಛಾವಣಿ ಯೋಜನೆಗಳು ವಿದ್ಯುತ್ ಸರಬರಾಜು ಕಂಪನಿಗಳಿಂದ ಅನುಷ್ಠಾನಗೊಳಿಸಲಾಗಿದ್ದು, ಈವರೆಗೆ 263 ಮೆ.ವ್ಯಾ. ಸಾಮರ್ಥ್ಯದಷ್ಟು ಯೋಜನೆಗಳು ಅನುಷ್ಠಾನಗೊಳಿಸಲಾಗಿದೆ.
ಆ)	ಸೌರಶಕ್ತಿಯಿಂದ ಉತ್ಪಾದಿಸುತ್ತಿರುವ ಪ್ರತಿ ತಿಂಗಳ ಸೌರ ವಿದ್ಯುತ್ ಪ್ರಮಾಣ ಎಷ್ಟು: (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಸೌರಶಕ್ತಿಯಿಂದ **11631.311** (Provisional) (Includes PPA, IPPs, Open Access, captive, Solar Roof Top) ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಲಭ್ಯವಾಗಿದ್ದು, ಪ್ರತಿ ತಿಂಗಳ ಸೌರ ವಿದ್ಯುತ್ ಪ್ರಮಾಣದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
ಇ)	ಇದರಲ್ಲಿ ಸರ್ಕಾರ ಬಳಸುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು: ಮಾರಾಟ ಮಾಡುತ್ತಿರುವ ಪ್ರಮಾಣ ಎಷ್ಟು?	2020-21ನೇ ಸಾಲಿನಲ್ಲಿ 11078.995 ದಶಲಕ್ಷ ಯೂನಿಟ್‌ಗಳಷ್ಟು ಸೌರ ವಿದ್ಯುತ್ತನ್ನು ಬಳಸಲಾಗಿದ್ದು, 552.316 ದಶಲಕ್ಷ ಯೂನಿಟ್‌ಗಳಷ್ಟು ಸೌರ ವಿದ್ಯುತ್‌ನ್ನು ಮಾರಾಟ ಮಾಡಲಾಗಿದೆ.

ಸಂಖ್ಯೆ: ಎನರ್ಜಿ 56 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಎಂ.ನಾರಾಯಣಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-633 ಕ್ಕೆಅನುಬಂಧ

ರಾಜ್ಯದಲ್ಲಿ 2020-21 ನೇ ಸಾಲಿನಲ್ಲಿ ಸೌರಶಕ್ತಿಯಿಂದ ಲಭ್ಯವಾದ ಪ್ರತಿ ತಿಂಗಳ ಸೌರ ವಿದ್ಯುತ್ ಪ್ರಮಾಣದ ವಿವರಗಳು

ತಿಂಗಳು	**ಸೌರಶಕ್ತಿಯಿಂದ ಲಭ್ಯವಾದ ಸೌರ ವಿದ್ಯುತ್ ನ ಪ್ರಮಾಣ (ಮಿ.ಯೂಗಳಲ್ಲಿ)**
ಏಪ್ರಿಲ್-20	1224.389
ಮೇ-20	1233.299
ಜೂನ್-20	1003.994
ಜುಲೈ-20	958.355
ಆಗಸ್ಟ್-20	901.455
ಸೆಪ್ಟೆಂಬರ್-20	965.632
ಅಕ್ಟೋಬರ್-20	1070.129
ನವೆಂಬರ್-20	987.297
ಡಿಸೆಂಬರ್-20	1111.231
ಜನವರಿ-21(ಮೊನಿಟರ್ಡ)	1055.500
ಫೆಬ್ರುವರಿ-21(ಮೊನಿಟರ್ಡ)	1040.000
ಒಟ್ಟು	**11551.28**